# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ಕಾರ್ಯಾಲಯ,

# ನಂಜನಗೂಡು

**ಸಿ.ಸಿ ನಂ.733-2019** **ಪಿ. ಡಬ್ಲುಃ 1**

| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಹೆಚ್.ಎಂ.ನಟರಾಜು<br>ನಂಜನಗೂಡು |
|---|---|
| | **ಸತ್ಯ ಪ್ರತಿಜ್ಞೆಯ** ಮೇರೆಗೆ **ದಿನಾಂಕ** 16-08-2022. |

**ಮುಂದುವರೆದ ಪಾಟೀ ಸವಾಲುಃ ಶ್ರೀ ಕೆ.ಟಿ.ಆರ್ ವಕೀಲರಿಂದಃ**

10. ನಾನು ಹೆಚ್ಚಿನ ಮೊತ್ತದ ಹಣದ ವ್ಯವಹಾರವನ್ನು ಮಾಡುತ್ತಿರುತ್ತೇನೆ. ನಾನು ಹೆಚ್ಚಿನ ಮೊತ್ತಕ್ಕೆ ಹಣದ ವ್ಯವಹಾರವನ್ನು ಮಾಡಿದ ಸಂದರ್ಭದಲ್ಲಿ ಭದ್ರತೆಗಾಗಿ ದಾಖಲೆಯನ್ನು ಪಡೆದುಕೊಳ್ಳುತ್ತೇನೆ ಎಂದರೆ ಸರಿ. ನಾನು ನನ್ನ ಅಗತ್ಯತೆಗಾಗಿ ಬ್ಯಾಂಕಿನಿಂದ 48 ಲಕ್ಷ ರೂಪಾಯಿಗಳನ್ನು ಸಾಲವಾಗಿ ಪಡೆದಿರುತ್ತೇನೆ. ನಾನು ಬ್ಯಾಂಕಿನ ವ್ಯವಹಾರದ ಬಗ್ಗೆ ಬಲ್ಲವನಾಗಿರುತ್ತೇನೆ. 2016 ರಲ್ಲಿ ನೋಟು ಅಮಾನ್ಯಕರಿಣಗೊಂಡ ನಂತರ ಸರ್ಕಾರವು ರೂ.2,00,000/- ಮೇಲ್ಪಟ್ಟು ಹಣದ ವ್ಯವಹಾರ ಮಾಡಿದ ಪಕ್ಷದಲ್ಲಿ ಅದನ್ನು ಬ್ಯಾಂಕ್ ಖಾತೆ ಮುಖೇನವೆ ವರ್ಗಾವಣೆ ಮಾಡಬೇಕೆಂಬ ನಿಯಮವನ್ನು ಮಾಡಲಾಗಿರುತ್ತದೆ ಎಂದರೆ ಸರಿ. ನಾನು ಬ್ಯಾಂಕಿನಿಂದ ಸಾಲವಾಗಿ ಪಡೆದ 48 ಲಕ್ಷ ರೂಪಾಯಿಗಳಿಗೆ ಸಂಬಂಧಿಸಿದ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನಿಮಗೆ ತೊಂದರೆ ಇದೆಯೇ ಎಂಬ ಪ್ರಶ್ನೆಗೆ ಸಾಕ್ಷಿ ಸದರಿ ದಾಖಲಾತಿಗಳನ್ನು ನಾನು ಈಗಾಗಲೇ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಆರೋಪಿಗೆ ಸಾಲವಾಗಿ 25 ಲಕ್ಷ ರೂಪಾಯಿ ಹಣ ನೀಡಿರುವುದಿಲ್ಲ, ಸಾಕ್ಷಿ ಮುಂದುವರೆದ ಒಂದು ವಾರದ ಒಳಗಾಗಿ ಹಣವನ್ನು ಮರುಪಾವತಿ ಮಾಡುತ್ತೇನೆ ಎಂದು ತಿಳಿಸಿದ್ದರಿಂದ ನಾನು ಆರೋಪಿಗೆ 25 ಲಕ್ಷ ರೂಪಾಯಿಗಳನ್ನು ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಯಾರಾದರೂ ಹೆಚ್ಚಿನ ಮೊತ್ತದ ಹಣವನ್ನು ನೀಡಿದ ಸಮಯದಲ್ಲಿ, ಹಣ ನೀಡಿದಕ್ಕೆ ಸಂಬಂಧಿಸಿದಂತೆ ದಾಖಲೆಯನ್ನು ಬರೆದುಕೊಡುತ್ತಾರೆ ಎಂದರೆ ಸರಿ. ಆರೋಪಿ ನನ್ನ ಸಂಬಂಧಿಕರಾಗಿದ್ದು, ಒಂದು ವಾರದ ಒಳಗಾಗಿ ಹಣವನ್ನು ಮರುಪಾವತಿ ಮಾಡಲು ಒಪ್ಪಿದ್ದರಿಂದ

ನಾನು ಅವರಿಂದ ಯಾವುದೇ ದಾಖಲೆಯನ್ನು ಪಡೆದುಕೊಳ್ಳಲಿಲ್ಲ, ಆ ರೀತಿ ದಾಖಲೆಯನ್ನು ಪಡೆದುಕೊಳ್ಳಲು ನನಗೆ ತೊಂದರೆ ಇರಲಿಲ್ಲ.

11. ನಾನು ಆದಾಯ ತೆರಿಗೆ ಪಾವತಿದಾರ. ನಾನು ನನ್ನ ಆದಾಯ ತೆರಿಗೆ ಘೋಷಣೆಯಲ್ಲಿ ಆರೋಪಿಗೆ ಸಾಲವಾಗಿ ಹಣ ನೀಡಿದ ಬಗ್ಗೆ ನಮೂದು ಮಾಡಿರುವುದಿಲ್ಲ. ಆರೋಪಿಗೆ ಸಾಲ ನೀಡಿದ ಬಗ್ಗೆ ನನ್ನ ಆದಾಯ ತೆರಿಗೆ ಘೋಷಣೆಯಲ್ಲಿ ತಿಳಿಸಲು ನನಗೆ ತೊಂದರೆ ಇತ್ತು. ನಾನು ಆರೋಪಿಗೆ ಸಾಲ ನೀಡಿದ ಬಗ್ಗೆ ನನ್ನ ಬಳಿ ಯಾವುದೇ ದಾಖಲೆ ಇಲ್ಲದೆ ಇದ್ದ ಕಾರಣ ನಾನು ಸದರಿ ವಿಚಾರವನ್ನು ನನ್ನ ಆದಾಯ ತೆರಿಗೆ ಘೋಷಣೆಯಲ್ಲಿ ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಗೆ 25 ಲಕ್ಷ ರೂಪಾಯಿಗಳನ್ನು ಸಾಲವಾಗಿ ನೀಡಿದಕ್ಕೆ ಸಂಬಂಧಿಸಿದಂತೆ ನನ್ನ ಬಳಿ ಯಾವುದೇ ದಾಖಲೆ ಇರುವುದಿಲ್ಲ ಎಂದರೆ ಸರಿ.

12. ಆರೋಪಿಯು ಗೃಹ ಸಾಲ ಪಡೆದ ಸಮಯದಲ್ಲಿ ನಾನು ಜಾಮೀನುದಾರನಾಗಿದ್ದು, ನಾನು ಗೃಹ ಸಾಲಕ್ಕೆ ಆರೋಪಿಗೆ ಜಾಮೀನುದಾರನಾದ ಕಾರಣ ಆತನಿಂದ ಸಹಿ ಮಾಡಿದ 12 ಖಾಲಿ ಚೆಕ್ಕುಗಳನ್ನು ಪಡೆದುಕೊಂಡಿದ್ದೆನು ಎಂದರೆ ಸರಿಯಲ್ಲ. ನಾನು ಆರೋಪಿಯಿಂದ ಸಹಿ ಮಾಡಿ ಪಡೆದ 12 ಖಾಲಿ ಚೆಕ್ಕುಗಳ ಪೈಕಿ ಒಂದು ಚೆಕ್ಕನ್ನು ದುರುಪಯೋಗಪಡಿಸಿಕೊಂಡು ಆರೋಪಿ ವಿರುದ್ಧ ಈ ಸುಳ್ಳು ಪಿರ್ಯಾದನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಬಳಿ ಸಾಕಷ್ಟು ಹಣ ಇಲ್ಲದೇ ಇದ್ದ ಕಾರಣ ನಾನು ಬ್ಯಾಂಕಿನಿಂದ 48 ಲಕ್ಷ ರೂಪಾಯಿಗಳನ್ನು ಸಾಲ ಪಡೆದಿರುತ್ತೇನೆ ಎಂಬ ಪ್ರಶ್ನೆಗೆ ಸಾಕ್ಷಿ ನಾನು ವ್ಯವಸಾಯದ ಉದ್ದೇಶಕ್ಕಾಗಿ ಬ್ಯಾಂಕಿನಿಂದ ಸಾಲ ಪಡೆದಿರುತ್ತೇನೆ ಎಂದು ನುಡಿಯುತ್ತಾರೆ. ದಿ.05-11-2018 ರಂದು ನಾನು ಆರೋಪಿಗೆ 25 ಲಕ್ಷರೂಪಾಯಿಗಳನ್ನು ಮುಬೈ ಸಾಲವರಾಗಿ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಗೆ ಸಾಲವಾಗಿ 25 ಲಕ್ಷರೂಪಯಿಗಳನ್ನು ನೀಡದೇ ಇರುವುದರಿಂದ ಆತನಿಂದ ಹಣ ಸಂದ ರಶೀದಿಯನ್ನು ಬರೆಸಿಕೊಂಡಿರುವುದಿಲ್ಲ ಎಂದರೆ ಸರಿ. ನಾನು ಆರೋಪಿಗೆ 25 ಲಕ್ಷ ರೂಪಾಯಿಗಳನ್ನು ಮುಬೈ ಆಗಿ ಹಣ ನೀಡದೇ ಇರುವುದರಿಂದ ಆರೋಪಿಯು ನನಗೆ 25 ಲಕ್ಷರೂಪಯಿಗಳನ್ನು ಮರುಪಾವತಿ ಮಾಡಲು ಭಾದ್ಯಸ್ಥನಲ್ಲ ಎಂದರೆ ಸರಿಯಲ್ಲ. ಆರೋಪಿಯಿಂದ ಭದ್ರತೆಗಾಗಿ ಪಡೆದ ಚೆಕ್ಕುಗಳನ್ನು ದುರುಪಯೋಗಪಡಿಸಿಕೊಂಡು ಆರೋಪಿ ವಿರುದ್ಧ ಈ ಸುಳ್ಳು ಪಿರ್ಯಾದನ್ನು ದಾಖಲಿಸಿರುವುದರಿಂದ ನಾನು ಕೇಳಿರುವ ಪರಿಹಾರಕ್ಕೆ ಅರ್ಹನಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಯಿಂದ ಹೇಗಾದರೂ ಮಾಡಿ 25 ಲಕ್ಷರೂಪಯಿಗಳನ್ನು ಸುಲಿಗೆ ಮಾಡಬೇಕೆಂಬ ಉದ್ದೇಶದಿಂದ ಈ ಸುಳ್ಳು ಪಿರ್ಯಾದನ್ನು ಆರೋಪಿ ವಿರುದ್ಧ ದಾಖಲಿಸಿರುತ್ತೇನೆ

ಎಂದರೆ ಸರಿಯಲ್ಲ. ನಾನು ಆರೋಪಿಗೆ 25 ಲಕ್ಷ ರೂಪಾಯಿಗಳನ್ನು ಮುಬೈ ಆಗಿ ಹಣ ನೀಡದೇ ಇರುವ ಕಾರಣ ನನ್ನ ಮೃತಪಟ್ಟ ಪತ್ನಿಯ ಸಮಕ್ಷಮ ಹಣವನ್ನು ನೀಡಿರುತ್ತೇನೆ ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆರೋಪಿಗೆ **ಮರು ವಿಚಾರಣೆ ಇಲ್ಲ.**25 ಲಕ್ಷ ರೂಪಾಯಿಗಳನ್ನು ಮುಬೈ ಆಗಿ ಹಣ ನೀಡದೇ ಇರುವ ಕಾರಣ ಅದನ್ನು ನನ್ನ ಆದಾಯ ತೆರಿಗೆ ಘೋಷಣೆಯಲ್ಲಿ ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**2 ನೇ ಕಿ.ಪ್ರ.ದ. ನ್ಯಾ ದಂ. ನಂಜನಗೂಡು**